ಅಧ್ಯಕ್ಷರು :- ಪ್ರಸ್ತಾವನೆಯು ಹೀಗೆ ಇದೆ. 1992ನೇ ಇಸವಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕದ ಜಂಟಿ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಒಪ್ಪಿಸಲು 1993ನೇ ಜೂನ್ 30ನೇ ತಾರೀಖಿನವರೆಗೆ ಕಾಲಾವಧಿಯನ್ನು ವಿಸ್ತರಿಸಲು ಸಭೆಯು ಅನುಮತಿಯನ್ನು ನೀಡುವುದು.

ಜಂಟಿ ಪರಿಶೀಲನಾ ಸಮಿತಿಗೆ 1993ನೇ ಜೂನ್ 30ನೇ ತಾರೀಖಿನವರೆಗೆ ಕಾಲಾವಧಿಯನ್ನು ವಿಸ್ತರಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ : ''ನಂಜುಂಡನ ಲಾಕಪ್ ಸಾವಿನ ಬಗ್ಗೆ ಮುಖ್ಯಮಂತ್ರಿಯವರು ಇದನ್ನು ಸಿಓಡಿಗೆ ರೆಫರ್ ಮಾಡಿರುವುದರ ಬಗ್ಗೆ.''

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ವಿಚಾರ ಇದ್ದು ನಾವು ತಮ್ಮ ಪರ್ಮಿಷನ್ ತೆಗೆದುಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :- ಮಾನ್ಯ ಅಧ್ಯಕ್ಷರೆ, ನಂಜುಂಡನ ಲಾಕಪ್ ಸಾವಿನ ಬಗ್ಗೆ ಆಗಲೇ ಪ್ರಸ್ತಾಪ ಮಾಡಿ ಅದರಲ್ಲಿ ವಿಷಯ ಇಷ್ಟೆ, ಮುಖ್ಯಮಂತ್ರಿಯವರು ಇದನ್ನು ಸಿಓಡಿಗೆ ರೆಫರ್ ಮಾಡಿದ್ದಾರೆ. ನಾನು ನೋಡಿದ್ದೇನೆ - ಮೇಲ್ನೋಟಕ್ಕೆ ನೋಡಿದಾಗ ಅದರಲ್ಲಿ ಸತ್ಯ ಕಂಡುಬಂದಿಲ್ಲ ಎಂದು ಒಬ್ಬ ಕಾನ್ಸ್ಟೇಬಲ್‌ನನ್ನು ಸಸ್‌ಪೆನ್ಸನ್‌ನಲ್ಲಿ ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಆ ಕಾನ್ಸ್ಟೇಬಲ್ ಏನು ಮಾಡಿದ್ದಾನೆ? ಮ್ಯಾಜಿಸ್ಟ್ರೇಟ್ ಮುಂದೆ ಹೋಗಿ ಅಫಿಡವಿಟ್ ಮಾಡಿ ನಾನು ನೋಡಿದ್ದೇನೆ ಸತ್ತ ಹೆಣವನ್ನು ಆಸ್ಪತ್ರೆಗೆ ತೆಗೆದುಕೊಂಡುಹೋಗಿ ಬದುಕಿಸುವುದಕ್ಕೆ ಪ್ರಯತ್ನ ಮಾಡಿದರು. ಬದುಕಲಿಲ್ಲ ಎಂದು ಹೇಳಿ ಹೆದರಿಕೊಂಡು ಹೇಳಿದ್ದಾನೆ. ಮತ್ತೆ ಅಧ್ಯಕ್ಷರೆ, ಆ ಕಾನ್ಸ್ಟೇಬಲ್ ಇನ್ನೊಂದು ಹೇಳಿದ್ದಾನೆ. ಇದನ್ನೆಲ್ಲಾ ಗಮನಿಸಿದ ನಾನು ಅನೇಕ ಹಿರಿಯ ಐಪಿಎಸ್ ಅಧಿಕಾರಿಗಳು ಅಧಿಕಾರದ ದುರುಪಯೋಗಪಡಿಸಿಕೊಂಡು ಅನುಭವಿಸುತ್ತಿರುವುದನ್ನು ಕಂಡು ನಡೆದ ಸಂಗತಿಯನ್ನು ತಮಗೆ ವರದಿ ಮಾಡುತ್ತೇನೆ ಎಂದು ಹೇಳಿ ಶಾಂತರಾಜಯ್ಯ ಅವರು ನ್ಯಾಯಧೀಶರ ಎದುರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಸರ್ಕಾರ ಇದನ್ನು ಮುಚ್ಚಿಹಾಕುವುದಕ್ಕೆ ಸರ್ಕಾರದಲ್ಲಿ ಇರತಕ್ಕ ಮೇಲ್ಮಟ್ಟದ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಿ ನಾನು ನೇರವಾದ ಆಪಾದನೆ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ ಈ ಲಾಕಪ್ ಸಾವುಗಳಿಗೆ ಕೇವಲ ಕೆಳಮಟ್ಟದಲ್ಲಿರತಕ್ಕಂತಹ ಒಬ್ಬ ಹೆಡ್ ಕಾನ್ಸ್ಟೇಬಲ್ ಅಥವಾ ಒಬ್ಬ ಕಾನ್ಸ್ಟೇಬಲ್‌ನನ್ನು ಸಸ್ಪೆಂಡ್ ಮಾಡುವುದರಲ್ಲಿ ಅರ್ಥವಿಲ್ಲ. ಅದು ಅಷ್ಟೇ ಅಲ್ಲ , ಅನೇಕ ಜನ ಆ ಲಾಕಪ್ ಡೆತ್‌ನ ಸಾವಾದ ಮೇಲೆ ಪೊಲೀಸ್ ಮೇಲ್ಮಟ್ಟದ ಅಧಿಕಾರಿಗಳು ಅಲ್ಲಿಗೆ ಲಾಕಪ್‌ಗೆ ಹೋಗಿ ಪೊಲೀಸ್ ಸ್ಟೇಷನ್‌ಗೆ ಹೋಗಿ ಅದನ್ನು ಮುಚ್ಚಿಹಾಕುವುದಕ್ಕೆ ಎಲ್ಲಾ ಪ್ರಯತ್ನವನ್ನು ಸಹಿತ ಮಾಡಿದ್ದಾರೆ. ಆದರಿಂದಾಗಿ ಅದೇ ಪೊಲೀಸ್‌ನವರ ಕಡೆಯಿಂದ ನಾವು ಸಿಓಡಿ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದರೆ, ಅದರಲ್ಲೇನು ಅರ್ಥ ಇದೆ? ಆದ್ದರಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ಆ ಒಂದು ಸರ್ಕಲ್‌ಗೆ ಸಂಬಂಧಪಟ್ಟ ಎಲ್ಲಾ ಪೊಲೀಸ್ ಅಧಿಕಾರಿಗಳನ್ನು ತತ್‌ತಕ್ಷಣ ನೀವು ಸಸ್ಪೆಂಡ್ ಮಾಡಬೇಕು. ಇದು ಸಿ.ಓ.ಡಿ ಅಲ್ಲ, ಸಿಬಿಐಗೆ ರೆಫರ್ ಮಾಡಬೇಕೆಂದು ಹೇಳಿ ಒತ್ತಾಯ ಮಾಡುತ್ತಿದ್ದೇನೆ. ಏತಕ್ಕೆ ಸಿಬಿಐಗೆ ಹೋಗಬೇಕೆಂದರೆ ಮೇಲ್ಮಟ್ಟದ ಅಧಿಕಾರಿಗಳು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದು ಅಷ್ಟೇ ಅಲ್ಲ, ನಾನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತಂದಿದ್ದೇನೆ. ಆ ಚಿತ್ರಹಿಂಸೆಯನ್ನು ನೋಡಿದಂಥ ಒಬ್ಬ ವಿಟ್‌ನೆಸ್ ನನ್ನ ಹತ್ತಿರ ಬಂದಿದ್ದಾರೆ. ಈ ಸರ್ಕಾರ ಏನಾದರೂ ನ್ಯಾಯಾಲಯಕ್ಕೆ ಬೆಲೆ ಕೊಡುತ್ತೇವೆ ಎಂದು

ಹೇಳುವುದಾದಲ್ಲಿ, ಅವನಿಗೆ ರಕ್ಷಣೆ ಕೊಟ್ಟರೆ ಅವನು ಬಂದು ಹೇಳುವುದಕ್ಕೂಸಹಿತ ತಯಾರಾಗಿದ್ದಾರೆ. ಆದ್ದರಿಂದ ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಲಾಕಪ್ ಸಾವುಗಳು ಕರ್ನಾಟಕದಲ್ಲಿ ಕಡಿಮೆಯಾಗಬೇಕು, ನಿಲ್ಲಬೇಕು, ನಿಲ್ಲಿಸುತ್ತೇನೆ ಎಂದುಹೇಳಿ ಏನು ಮುಖ್ಯಮಂತ್ರಿಗಳು ಹೇಳಿದ್ದಾರೆ ಇದು ಆಗಬೇಕಾದರೆ ಇದರ ಬಗ್ಗೆ ಸಿಬಿಐಯಿಂದ ತನಿಖೆ ಮಾಡಿಸುವುದಕ್ಕೆ ಸರ್ಕಾರ ಕ್ರಮಕ್ಕೆಗೊಳ್ಳಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಬಹಳ ವಿವರವಾಗಿ ಈ ವಿಷಯವನ್ನು ಇಲ್ಲಿ ಪ್ರಸ್ತಾಪಮಾಡಿದ್ದಾರೆ. ಕೆಲವು ವಿಚಾರವನ್ನು ಅಷ್ಟೇ ನಾನು ಸದನದ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಸನ್ಮಾನ್ಯ ಜೀವರಾಜ ಆಳ್ವರವರು, ವಾಟಾಳ್ ನಾಗಾರಾಜ್ ರವರು ಈ ವಿಷಯದ ಬಗ್ಗೆ ಪ್ರಸ್ತಾಪಮಾಡಿದಾಗ, ಮಾನ್ಯ ಮುಖ್ಯಮಂತ್ರಿಯವರು ಬಹಳ ಲಘುವಾಗಿ ತೆಗೆದುಕೊಂಡರು ನಾವು ಇಲ್ಲಿ ಏನು ಹೇಳುತ್ತಿದ್ದೇವೆ, ಅದರ ಬಗ್ಗೆ ಗಂಭೀರವಾಗಿ ತಾವು ಪರಿಶೀಲನೆ ಮಾಡುತ್ತಿಲ್ಲ. ಪೊಲೀಸ್ ಅಧಿಕಾರಿಗಳು ತಮಗೇನು ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ, ಅದನ್ನಷ್ಟೇ ತಾವು ಓದುತ್ತಿದ್ದೀರಿ ಎಂದು ಹೇಳಿದಾಗ, ಈ ವಿಷಯದ ಬಗ್ಗೆ ನಾನು ಪರಿಶೀಲನೆ ಮಾಡಿ ಮಾತನಾಡುತ್ತೇನೆ ಎಂದು ಹೇಳಿದ್ದರು. ನಿನ್ನೆ ಈ ವಿಷಯದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುವಾಗ ಅವರು ಒಂದು ಮಾತನ್ನು ಹೇಳಿದ್ದರು. ನಾನು ಎಲ್ಲಾಕಾಗದ ಪತ್ರಗಳನ್ನು ಪರಿಶೀಲನೆ ಮಾಡಿದ್ದೇನೆ. Inquest report ನೋಡಿದ್ದೇನೆ. ಎಫ್‌ಐಆರ್ ನೋಡಿದ್ದೇನೆ ಕೇಸ್ ಡೈರಿ ನೋಡಿದ್ದೇನೆ ಅಂತ ಹೇಳಿ ಏನು ಹೇಳಿದರು, ಏನೇನು ಕಂಡುಬರುತ್ತಿಲ್ಲ, ಆದ್ದರಿಂದ ಕಾನ್ಸ್‌ಟೇಬಲ್‌ಗಷ್ಟೇ ಸಸ್ಪೆಂಡ್ ಮಾಡಿದೆವು ಎಂದು ಹೇಳಿದರು. ನಾವು ಏನು ಕೇಳುತ್ತಿದ್ದೇವೆ ಎಂದರೆ ಯಾರು ಈ ಶಾಂತರಾಜಯ್ಯ. ಇಲ್ಲಿಗೆ ಇವರು ನಿಮ್ಮ ಸಿಟಿ ಅಡಿಷನಲ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ಮುಂದೆ ಸ್ಟೇಟ್‌ಮೆಂಟ್ ಕೊಟ್ಟರು, ಆ ಸ್ಟೇಟ್‌ಮೆಂಟ್ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿಲ್ಲ. ಈ ಸ್ಟೇಟ್‌ಮೆಂಟ್ 23ನೇ ತಾರೀಖು ಮುಂಜಾನೆ ಎಂಟು ಗಂಟೆಗೆ ರೆಕಾರ್ಡ್ ಆಗಿದೆ ಇನ್ನೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಏತಕ್ಕೆ ಬಂದಿಲ್ಲ? ಇದು ಅವರ ಗಮನಕ್ಕೆ ಬರುತ್ತಿತ್ತು, ಆದರೆ ಉದ್ದೇಶಪೂರ್ವಕವಾಗಿ ಹಿರಿಯ ಅಧಿಕಾರಿಗಳ ಒತ್ತಡಕ್ಕೆ ಅಲ್ಲಿ ಇದ್ದ ಸಿಪಿಐ ಮತ್ತು ಕೆಎಸ್‌ಐಗೆ ಸಂರಕ್ಷಣೆ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸುಳ್ಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಮುಖ್ಯಮಂತ್ರಿಗಳ ಮೇಲೆ ಚಾರ್ಜ್ ಮಾಡುತ್ತಿದ್ದೇನೆ. ಮತ್ತು ಇಡೀ ಸದನದ ಮತ್ತು ನಾಡಿನ ಒಂದು ಕ್ಷಮೆ ಕೇಳಬೇಕಾಗುತ್ತದೆ. ಏಕೆಂದರೆ ಸದನವನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮತ್ತು ತನ್ನ ಕಡೆ ಇದ್ದಂಥ ಇನ್‌ಫರ್ಮೇಷನ್ ಸಪ್ರೆಸ್ ಮಾಡುವುದಕ್ಕೂ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದ್ದಾರೆ. 22ನೇಯ ತಾರೀಖು ರಾತ್ರಿ ಈ ಶಾಂತಯ್ಯನು ತನ್ನ ಡ್ಯೂಟಿಗೆ ಹೋದ ರಾತ್ರಿ 2ಗಂಟೆಗೆ ಡ್ಯೂಟಿಗೆ ಹೋದಾಗ ಅಲ್ಲಿ ಇದ್ದ ಚಿಕ್ಕಬೋರಯ್ಯ ಅವರು ಹೇಳಿದರು ಯಾರನ್ನೂ ಅರೆಸ್ಟ್ ಮಾಡಿಲ್ಲ ಅಲ್ಲಿ ಒಂದು ಸೆಂಟ್ರಿ ಡೈರಿ ಇದೆ. ಸೆಂಟ್ರಿ ಡೈರಿಯಲ್ಲಿ ಸಹ ಯಾವ ಆರೆಸ್ಟ್ ಬಗ್ಗೆ ನಮೂದು ಇಲ್ಲ. ಅವರು ಹೋದ ನಂತರ ಈ ಶಾಂತಯ್ಯ ಇದು ಒಂದು ನೇಣು ಹಾಕಿದ ವ್ಯಕ್ತಿಯನ್ನು ಅಲ್ಲಿ ಲಾಕಪ್‌ನಲ್ಲಿ ನೋಡಿದರು. ನೋಡಿದ ತಕ್ಷಣ ಭಯ ಪಟ್ಟು ಆತನು ಕಮಲಾನಗರದ ಕುಮಾರನನ್ನು ಕರೆಯಿಸಿ ಲಾಕಪ್ ಬೀಗವನ್ನು ತೆಗೆದು ಆ ಹೆಣವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಆಸ್ಪತ್ರೆಗೆ ತೆಗೆದುಕೊಂಡು ಹೋದಂತಹ ಆಟೋರಿಕ್ಷಾ ನಂಬರ್ ಸಿಕೆಪಿ 5559. ಇದರಲ್ಲಿ ಆ ನಂಜುಂಡನ ಹೆಣವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಅವನು ನಂಜುಂಡಯ್ಯ ಎಂದು ಗೊತ್ತಾಯಿತು. ಅವನು ಸತ್ತು ಹೋಗಿದ್ದ ಎಂದು ಗೊತ್ತಾಯಿತು. ತಕ್ಷಣ ಈತನು ಬಂದು ಹಿರಿಯ ಅಧಿಕಾರಿಗೆ ಹೀಗಿಗೇ ಆಗಿದೆ ಲಾಕಪ್ ಡೆತ್ ಆಗಿದೆ ಅಂತ ಹೇಳಿದಾಗ ಯಾವ ಒಬ್ಬ ಅಧಿಕಾರಿಯೂ ಇವರ ಮಾತನ್ನು ಕೇಳಿಲ್ಲ. ನೀನು ಇದರ ಬಗ್ಗೆ ಮಾತನಾಡಿದರೆ ನಿನ್ನ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ನೀನು ನೌಕರಿಯನ್ನು ಮಾಡಬೇಕೊ ಅಥವಾ ಇಲ್ಲವೋ ಎಂದು ಕೇಳತಕ್ಕಂತ ಈ ತರಹದ ಅಧಿಕಾರವನ್ನು ಈ ರಾಜ್ಯದ ಹಿರಿಯ ಅಧಿಕಾರಿಗಳಿಗೆ ಕೊಟ್ಟರೆ ಇನ್ನು ಯಾವ ತರಹದ ರಕ್ಷಣೆ

ಜನರಿಗೆ ಸಿಗುತ್ತದೆ? ಪರಿಶಿಷ್ಟ ಜಾತಿಯ ಜನರ ಮೇಲೆ ಅತ್ಯಾಚಾರವಾಗುತ್ತಿದೆ. ಲಾಕಪ್ ಡೆತ್ ಹೆಚ್ಚಾಗುತ್ತಿದೆ. ಇಷ್ಟು ಆದಾಗ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಂದು ಹಗುರವಾಗಿ ಏನು ನಡೆದಿಲ್ಲ ಎಂದು ಹೇಳಿದರೆ ನಾವು ಯಾರ ಮಾತನ್ನು ಕೇಳಬೇಕು? ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಇದರ ಬಗ್ಗೆ ಸಿಓಡಿ ತನಿಖೆಯನ್ನು ಮಾಡಿಸಬೇಕು. ಸಿಓಡಿಯ ಬಗ್ಗೆ ವಿಶ್ವಾಸವಿದೆ. ಆದರೆ ಇವತ್ತು ಹಿರಿಯ ಅಧಿಕಾರಿ ಈ ರೀತಿ ಮಾಡುವುದರಿಂದ ಸಿಓಡಿ ಎನ್‌ಕ್ವೈರಿ ಮಾಡಲಿಕ್ಕೆ ಕಷ್ಟವಾಗಬಹುದು. ಸಿಬಿಐ ತನಿಖೆಯಾಗಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಲಾ ಅಂಡ್ ಆರ್ಡರ್ ಅಧಿಕಾರಿ ಆರ್.ಓಲ್. ಭಲಪತಿ ಅಂತ, ಬೆಟ್ಟೇಗೌಡ ಸಿಪಿಐ, ಇಬ್ಬರು ಶಾಮೀಲಾಗಿದ್ದಾರೆ. ಬೆಟ್ಟೇಗೌಡ ಸಿಪಿಐ ಮುಂಚಾನೆ ಪೊಲೀಸ್ ಸ್ಟೇಷನ್‌ಗೆ ಬಂದು ಇದರ ಬಗ್ಗೆ ಹೆಚ್ಚಿಗೆ ಮಾತನಾಡಿದರೆ ಕ್ರಮ ತೆಗೆದುಕೊಳ್ಳುತ್ತೇನೆ, ಮನೆಗೆ ಕಳುಹಿಸುತ್ತೇನೆ ಎಂದು ಹೇಳುತ್ತಾನೆ. ಅಷ್ಟೇ ಅಲ್ಲ ಎಲ್ಲಾ ರೆಕಾರ್ಡುಗಳನ್ನು ಫ್ಯಾಬ್ರಿಕೇಟ್ ಮಾಡಿದ್ದಾರೆ. All Recrods have been Fabricated. ರೆಕಾರ್ಡ್ಸ್ ಫ್ಯಾಬ್ರಿಕೇಟ್ ಆದರೆ ಅಂಥ ಅಧಿಕಾರಿ ಕಡೆಯಿಂದ ನಾವು ಏನು ಅಪೇಕ್ಷೆ ಮಾಡಲಿಕ್ಕೆ ಸಾಧ್ಯ. ಯಾವ ನ್ಯಾಯವನ್ನು ಕೊಡಲಿಕ್ಕೆ ಸಾಧ್ಯ. ಇವರು ಮ್ಯಾಜಿಸ್ಟ್ರೇಟ್ ಮುಂದೆ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅಷ್ಟೇ ಅಲ್ಲ, ಆ ಸ್ಟೇಟ್‌ಮೆಂಟ್‌ನಲ್ಲಿ Bonafide ಮಾಡಿದ್ದಾರೆ. ಮತ್ತೊಬ್ಬರನ್ನು ಕರೆದು ಆ ಬಾಡಿಯನ್ನು ಹೊರಗೆ ತೆಗೆದಿದ್ದಾರೆ. ಆಟೋರಿಕ್ಷಾ ನಂಬರನ್ನು ಕೊಟ್ಟಿದ್ದಾರೆ. ಯಾವ ಆಟೋರಿಕ್ಷಾವನ್ನು ನಾವು ತೆಗೆದುಕೊಂಡು ಹೋಗಿದ್ದೇವೆ, ಯಾವ ಆಸ್ಪತ್ರೆಗೆ ಹೋಗಿದ್ದೇವೆ, ಆ ಆಸ್ಪತ್ರೆಯ ಹೆಸರನ್ನು ಹೇಳಿದ್ದಾನೆ. ಈ ಎಲ್ಲಾ ರೆಕಾರ್ಡ್ಸ್‌ಗಳು ಇದ್ದಾಗ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಂಥಹ ಘಟನೆ ಆಗಿಲ್ಲ ಲಾಕಪ್ ಡೆತ್ ಆಗಿಲ್ಲ ಅಂತ ಹೇಳಿದರೆ ಇದು ಸರಿಯಲ್ಲ ಅಷ್ಟೇ ಅಲ್ಲ ನಂಜುಂಡಯ್ಯ ಎನ್ನುವವನನ್ನು 40 ದಿವಸಗಳ ಕಾಲ ಬಂಧನದಲ್ಲಿಡುವುದಕ್ಕೆ ಯಾವ ಕಾನೂನಿನಲ್ಲಿ ಅವಕಾಶವಿದೆ? ಅರೆಸ್ಟ್ ಆದ 24 ಗಂಟೆಯೊಳಗೆ ಕೋರ್ಟ್‌ಗೆ ರಿಪೋರ್ಟ್ ಹಾಕಬೇಕಾಗುತ್ತದೆ. ಅವನನ್ನು 40 Days Unlawful ಕಸ್ಟಡಿಗೆ ಇಟ್ಟರೆ ಇದಕ್ಕೆ ಯಾರು ಜವಾಬ್ದಾರರು? ಯಾವ ದೊಡ್ಡ ಮಹಾಪಾಪವನ್ನು ಇವನು ಮಾಡಿದ್ದ? ಇದು ನಮ್ಮ ಸದನಕ್ಕೆ ಗೊತ್ತಾಗಬೇಕಾಗುತ್ತದೆ. ಇವತ್ತು ನಾಡಿನ ಜನರಿಗೆ ಸಂರಕ್ಷಣೆ ಇಲ್ಲ. ಜನರಲ್ಲಿ ಒಂದು ಭಯದ ವಾತಾವರಣ ಬಂದಿದೆ. ನಿಮ್ಮ ಕಚ್ಚಾಟ ನಿಮ್ಮ ಜಗಳದಿಂದ ಇವತ್ತು ಸರಿಯಾದಂತಹ ಆಡಳಿತವನ್ನು ಕೊಡಲಿಕ್ಕೆ ಬರುತ್ತಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ, ಅವರಿಗೆ ಬೇಜಾರಾಗಿರಬಹುದು. ಈ ಖಾತೆಯನ್ನು ನೀವು ಏತಕ್ಕೆ ಇಟ್ಟುಕೊಳ್ಳುತ್ತೀರಿ, ಗೃಹಖಾತೆಗೆ ಇವತ್ತು ಜವಾಬ್ದಾರಿಯುತವಾದಂತಹ ಮಂತ್ರಿಯನ್ನು ಕೊಡಿ. ಎಂದು ಹೇಳಿದ್ದೆ. ಇದರ ಬಗ್ಗೆ ಸಿ.ಬಿ.ಐ ತನಿಖೆಯಾಗಬೇಕು ಮತ್ತು ಚಲಪತಿಯಾಗಲಿ, ಬೆಟ್ಟೇಗೌಡನಾಗಲಿ ಮತ್ತು ಇತರೆ ಯಾರು ಇದ್ದಾರೆ ಅವರೆಲ್ಲ ತಕ್ಷಣ ಸಸ್ಪೆಂಡ್ ಆಗಬೇಕು. ದಕ್ಷ ಆಡಳಿತವನ್ನು ಕೊಡುತ್ತೇವೆ. ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು ಈ ಸರ್ಕಾರ ಏನು ಹೇಳುತ್ತಿದೆ. ಅದರ ಬಗ್ಗೆ ಸರ್ಕಾರ ಇವತ್ತು ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಿಮಗೆ ಕೇವಲ ಹಿರಿಯ ಅಧಿಕಾರಿಗಳ ಮಾತುಗಳನ್ನು ಕೇಳಿಕೊಂಡು ಬ್ಯೂರೊಕ್ರಸಿಯನ್ನು ನಾಶಮಾಡಿ ಅದರ ಹೆಸರಿನಲ್ಲಿ ಸರ್ಕಾರವನ್ನು ನಡೆಸಬೇಕಾದರೆ ನಿಮಗೆ ದೇವರು ಆಶೀರ್ವಾದವನ್ನು ಮಾಡುವುದಿಲ್ಲ. ಜನರೂ ಆಶೀರ್ವಾದ ಮಾಡುವುದಿಲ್ಲ. ನಿಮ್ಮ ಕಡೆಯಿಂದ ತಪ್ಪಾಗಿದೆ, ತಪ್ಪಾಗಿದೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡು ಸಿ.ಬಿ.ಐ ಎನ್‌ಕ್ವೈರಿ ಮಾಡಿ ತಪ್ಪಿತಸ್ಥರನ್ನು ತಕ್ಷಣ ಸಸ್ಪೆಂಡ್ ಮಾಡುವ ವ್ಯವಸ್ಥೆ ಆಗಬೇಕು. ಮೊನ್ನೆ ತಾನೇ ಸುಪ್ರೀಂ ಕೋರ್ಟ್‌ನವರು ಒಂದು ಆರ್ಡರನ್ನು ಮಾಡಿದ್ದಾರೆ. ಎಲ್ಲೆಲ್ಲಿ ಲಾಕಪ್ ಡೆತ್ ಆಗಿವೆ, ಎಲ್ಲೆಲ್ಲಿ ಸರ್ಕಾರ ಕಾಂಪನ್‌ಸೇಷನ್ ಕೊಡಬೇಕೆಂದು ಹೇಳಿದ್ದಾರೆ. ನಂಜುಂಡಯ್ಯನಿಗೆ ಕಾಯಿದೆ ಬದ್ಧವಾಗಿ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ನೀವು ಕಾಂಪನ್‌ಸೇಷನ್ ಕೊಡುವ ವ್ಯವಸ್ಥೆ ಮಾಡಬೇಕು. ಶಾಂತಯ್ಯ ಭಯಭೀತನಾಗಿದ್ದಾನೆ. ಅವನ ಸಂರಕ್ಷಣೆಯನ್ನು ಕೇಳುತ್ತಿದ್ದಾನೆ. ದೊಡ್ಡ ದೊಡ್ಡ ಅಧಿಕಾರಿಗಳನ್ನು ಬಿಟ್ಟು ಸಣ್ಣ ಫೈಲ್ ಇಟ್ಟುಕೊಂಡು ಒಬ್ಬ ಕಾನ್ಸ್‌ಟೇಬಲ್‌ನನ್ನು ಇಟ್ಟುಕೊಂಡು ಅವನನ್ನು ಬಲಿ ಮಾಡುವುದಕ್ಕೆ ಪೊಲೀಸ್ ಇಲಾಖೆ ಹೊರಟಿದೆ. ಅವನಿಗೆ ಸಂರಕ್ಷಣೆಯ ವ್ಯವಸ್ಥೆ ಇದೆ., ಸಂರಕ್ಷಣೆಯನ್ನು ಕೊಡಬೇಕಾಗುತ್ತದೆ. ನ್ಯಾಯ ಮಾಡಬೇಕಾಗುತ್ತದೆ.

ಇದರ ಬಗ್ಗೆ ಸೂಕ್ತವಾದ ತನಿಖೆ ಸಿ.ಬಿ.ಐಯಿಂದ ಆಗಿ ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಷ್ಟನ್ನು ನಾನು ಈ ಸದನದಲ್ಲಿ ಹೇಳಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಇವತ್ತೇ ಸ್ಟೇಟ್‌ಮೆಂಟ್ ಕೊಟ್ಟು ಸೂಕ್ತವಾದಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಡಾ. ಜೀವರಾಜ ಆಳ್ವ (ಮಲ್ಲೇಶ್ವರ) :- ಮಾನ್ಯ ಅಧ್ಯಕ್ಷರೇ, ನಾನು ಬಹಳ ನೋವಿನಿಂದ ಮಾತನಾಡುತ್ತಿದ್ದೇನೆ. ನನ್ನ ಆಲೋಚನೆ ಪ್ರಕಾರ we had a very responsive Chief Minister a responsive Chief Minsiter to legislators & men from public life. ಸಾಮಾಜಿಕ ಜೀವನದಲ್ಲಿ ಇರುವಂತಹ ನಾವು ಹೇಳಿದ ಭಾವನೆಗಳಿಗೆ ಇವರು ಸ್ಪಂದಿಸುತ್ತಾರೆಂದು ಅತ್ಯಂತ ಕಠಿಣವಾದ ಆರೋಪಗಳನ್ನು ನಾವು ಮಾಡಿದ್ದೇವೆ. ವಿಚಾರ ತಿಳಿದುಕೊಂಡು ಹೇಳಿದ್ದೇವೆ. ಆ ದಿವಸ ಬೆಳಗ್ಗೆ ಶಾಂತಯ್ಯ ಎನ್ನುವಂತಹ ಪೊಲೀಸ್ ಕಾನ್‌ಸ್ಟೇಬಲ್ ಬಂದು ಹೇಳಿದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಸಹ ತಿಳಿದುಕೊಳ್ಳಬೇಕೆನ್ನುವಂತಹ ಭಾವನೆಯಿಂದ ಅತ್ಯಂತ ವಿಶದವಾಗಿ ವಿಚಾರಗಳನ್ನು ಹೇಳಿದ್ದೇವೆ. ಆ ವಿಚಾರದಲ್ಲಿ ಒಂದು ಚೂರು ಚಾಚು ತಪ್ಪಿಲ್ಲ. 40 ದಿವಸಗಳ ಕಾಲ ಒಬ್ಬನನ್ನು ಸೆರೆಮನೆಯ ವಾಸದಲ್ಲಿ ಇಟ್ಟಿದ್ದಾರೆ. ಅನ್ಯಾಯ ಮಾಡಿದ್ದಾರೆ. ಅದರ tapes ಇದೆ. ಆ ಕ್ರಮಟೋರಿಯಂ ಕಾವಲುಗಾರರ ಹೇಳಿಕೆಯ ಬಗ್ಗೆಯೂ ಟೇಪ್ ಇದೆ. ಇದು ಎಲ್ಲವೂ ಇದೆ ಎಂದು ಹೇಳಿದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಇದರ ಬಗ್ಗೆ ನಾನು ಕೂಲಂಕುಷವಾಗಿ ಚರ್ಚೆ ಮಾಡಿ ನಾಳೆ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ಈ ಹೇಳಿಕೆಯಿಂದ ಎಷ್ಟು ನೋವು ಆಗಿದೆ ಅಂತ ಹೇಳಿದರೆ, ನಾವು ಶಾಸನ ಸಭೆಯಲ್ಲಿ ಇರುವಂತಹವರು ಜನರ ಸುಖ ದುಃಖಗಳಿಂದ ಸ್ಪಂಧಿಸುವಂತಹ ವ್ಯಕ್ತಿಗಳು, ಸಾಧಾರಣವಾಗಿ, ಲಾಕಪ್‌ಡೆತ್ ಇದರ ಬಗ್ಗೆ ನಾನು ಮಾತನಾಡುವುದಿಲ್ಲ. ಆ ದಿವಸ ವಿರೋಧ ಪಕ್ಷದ ನಾಯಕರು, ಮುಖ್ಯ ಮಂತ್ರಿಗಳಿಗೆ ನಾಳೆಯವರೆಗೂ ಒಂದು ಅವಕಾಶವನ್ನು ಕೊಡೋಣ ಎಂದು ಹೇಳಿದರು, ಅದನ್ನು ನಾನು ಒಪ್ಪಿದೆ. ಇದು ಏತಕ್ಕೆ ಆಯಿತು ಅಂದರೆ, ನಾನು ಒಂದು ತಪ್ಪು ಮಾಡಿದ್ದೇನೆ ಅಂತ ಅನ್ನಿಸುತ್ತದೆ. ಆ ತಪ್ಪು ಏನು ಎಂದು ಹೇಳಿದರೆ I questioned the bona-fides of the Commissioner of Police.

ರಾಜ್ಯದ ನಗರದ ಕಮಿಷನರ್ ಏತಕ್ಕೆ ಪೊಲೀಸ್ ಅಧಿಕಾರಿಗಳ ರಕ್ಷಣೆಗೆ ಹೋದರು? ಏನು ವಿಚಾರ ತಿಳಿಯದೆ ಇದನ್ನು ಸೂಯಿಸೈಡ್ ಅಂತ ಏತಕ್ಕೆ ಕೊಟ್ಟರು? ಏಕೆಂದರೆ ಇವತ್ತು ಲಾಕಪ್‌ಡೆತ್ ಆದ ತಕ್ಷಣ ಕೂಡಲೆ ಸಿಓಡಿ ಎನ್‌ಕ್ವಯರಿ ಆಗಬೇಕೆಂದು ಇದೆ. ಇದರಲ್ಲಿ here is a strict code of conduct that has been envisaged.

ವಿಧಾನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಇದನ್ನು ಹೇಳಿದ್ದಾರೆ. ಇಷ್ಟು ತಿಳಿದ ಮೇಲೂ ಕೂಡ ಒಂದಲ್ಲ ಎರಡು ಬಾರಿ ರಾಜ್ಯದ ಕಮಿಷನರ್ ಈ ಮಾತನ್ನು ಹೇಳಬಾರದಾಗಿತ್ತು. ತಪ್ಪು ಮಾಡಿದರು ಅಂತ ಹೇಳಿದ ತಕ್ಷಣ ಇನ್ನು ಈ ಪೊಲೀಸ್ ಅಧಿಕಾರಿಗಳ ಪ್ರತಿಷ್ಠೆಗೆ ಅಡ್ಡಿ ಬಂತು ಎಂದು ಕಾಣುತ್ತದೆ. ಮರುದಿವಸವೇ ಡೆಪ್ಯುಟಿ ಕಮಿಷನರ್ ಹೋಗಿದ್ದಾರೆ. ಅಲ್ಲಿ ಈ ಕಾನ್‌ಸ್ಟೇಬಲ್‌ಗೆ ಇಬ್ಬರನ್ನು ಕರೆದು ಬಾಯಿಗೆ ಬಂದಹಾಗೆ ಬೈದಿದ್ದಾರೆ. ಹೆದರಿಸಿದ್ದಾರೆ, ಇವರುಗಳಿಗೆ ಇನ್ನೂ ಒತ್ತಾಸೆಯನ್ನು ಕೊಟ್ಟು ನೀನು ಬೇಕಾದರೂ ಮಾಡು, ಸಬ್‌ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್‌ರವರಿಗೆ they have gone to the protection of these culprits. ಲಾಕಪ್‌ಡೆತ್ ಬೇರೆಲ್ಲೋ ಆಯಿತು ಅದು ಬೇಡ 40 ದಿವಸಗಳ ಡಿಟೆನ್‌ಷನ್ ಅನ್ನು ನೀವು ಒಪ್ಪುತ್ತೀರಾ ಅಥವಾ ವಿಧಾನ ಸಭೆ ಒಪ್ಪುತ್ತದೆಯೇ? ಈ ಸರ್ಕಾರ ಒಪ್ಪುತ್ತದೆಯೇ ಎಂದು ಕೇಳುತ್ತೇನೆ. ನಾನು ಮೊನ್ನೆ ಬಹಳ ನೋವಿನಿಂದ ಹೇಳಿದೆ. Do we have to get a certificate from the Chief Minister? ಈ ತರಹ ವ್ಯವಸ್ಥೆ ಬಗ್ಗೆ ಒಂದು ಕಿವಿ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳಲಿಕ್ಕೆ ಇಷ್ಟಪಡುತ್ತಿದ್ದೇನೆ. I am simply shocked.

ನಿಮಗೆ ಅಧಿಕಾರಿಗಳ ಮಾತು ಅವರು ಕೊಟ್ಟ ರಿಪೋರ್ಟ್‌ನ್ನು ತಿಳಿದುಕೊಂಡು ನೀವು ಇದನ್ನು ಹೇಳಬೇಕೆ? 40 ದಿವಸಗಳ ಹಿಡಿದಿಟ್ಟಿದ್ದನ್ನು ಕಾನ್ಸ್‌ಟೇಬಲ್, ಮ್ಯಾಜಿಸ್ಟ್ರೇಟ್ ಮನೆಗೆ ಹೋಗಿ ಅಫಿಡವಿಟ್ ಬರೆದು ರಿಟರ್ನ್ ಕಂಪ್ಲೆಂಟ್ ಕೊಡುತ್ತಾನೆ. ಅದಕ್ಕೆ ಬೆಲೆ ನಿಮಗೆ ಇಲ್ಲ, ನೀವು ಏನು ಎನ್‌ಕ್ವಯರಿ ಮಾಡುತ್ತೀರಿ? ಯಾವ ಸಿಓಡಿ ಎನ್‌ಕ್ವಯರಿ ಮಾಡುತ್ತೀರಿ? ಇದು ಬರೀ ನಂಜುಂಡನ ಪ್ರಶ್ನೆ ಅಲ್ಲ. ಇವತ್ತು ನಾನು ಪ್ರಶ್ನಿಸುವುದು, the very attitude of the Chief Minsiter ಇದು ತಪ್ಪು. ದಯವಿಟ್ಟು ಶಾಸನ ಸಭೆ ನಡೆಯುವಾಗ ಇಂಥಹ ಅಘೋರ ಕೃತ್ಯ ಆಗಿದೆ. and they go scot free ನೀವು ಯಾರೋ ಕೆಲಸಕ್ಕೆ ಬಾರದ ಒಬ್ಬ ಪೇದೆಯನ್ನು ಸಸ್ಪೆಂಡ್ ಮಾಡುತ್ತೀರಿ. ಇದೇ ಒಂದು ಹೆದರಿಕೆಯನ್ನು ನಾನು ಆಗಲೇ ಸರ್ಕಾರಕ್ಕೆ ತಿಳಿಸಿದ್ದೆ. ಇದು ಇದೇ ರೀತಿ ಆಗುತ್ತದೆ ಎಂದು ಆಗಲೇ ಹೇಳಿದೆ. ಆಗಲೇ ಮುಖ್ಯಮಂತ್ರಿಗಳ ಹತ್ತಿರ ಒಬ್ಬರು ಮಂತ್ರಿಗಳು ಕಿವಿಯಲ್ಲಿ ಮಾತನಾಡಿದರು. ಬಹಳ ನೋವಿನಿಂದ ನಾನು ಹೇಳುತ್ತೇನೆ, ವಿಧಾನ ಸಭೆಯ ಪ್ರತಿಯೊಬ್ಬರು ವಿರೋಧ ಪಕ್ಷದ ನಾಯಕರು ಇಷ್ಟು ಕಟುವಾಗಿ ಕಮಿಷನರ್‌ರವರು ಹೇಳಿದ್ದುದು ತಪ್ಪು ಎಂದು ಹೇಳಿದಾಗ ಅವರನ್ನು ಡಿಫಂಡ್ ಮಾಡಲು ಹೋದರೆ We have to question you, your modus operendi or your style of functioning ನೀವು ಅಧಿಕಾರಿಗಳು ಕೊಟ್ಟಪೇಪರ್, ಸಬ್‌ಇನ್ಸ್‌ಪೆಕ್ಟರ್ ಕೊಟ್ಟ ಪೇಪರ್ ಅಥವಾ ಕಮಿಷನರ್‌ರವರು ಕೊಟ್ಟ ರಿಪೋರ್ಟ್ ಓದಬೇಡಿ. 40 ದಿವಸ ಡಿಟೆನ್‌ಷನ್ ಆಗಿದೆ. ಲಾಕಪ್‌ಡೆತ್ ಹೇಗಾಯಿತು? ಸೂಯಿಸೈಡ್ ಹೇಗಾಯಿತು ಅದು ಎರಡನೆಯ ಪ್ರಶ್ನೆ. 40 ದಿವಸ ಡಿಟೆನ್‌ಷನ್‌ನಲ್ಲಿ ಇಟ್ಟಿದ್ದುದು ತಪ್ಪಲ್ಲವೆ. 3000 ರೂ.ಗಳನ್ನು ಆ ಹೆಂಗಸಿನಿಂದ ದುಡ್ಡು ತೆಗೆದುಕೊಂಡಿದ್ದು ತಪ್ಪಲ್ಲವೇ? ಆ ಪೇದೆ ಮ್ಯಾಜಿಸ್ಟ್ರೇಟ್ ಹತ್ತಿರ ಬೆಳಿಗ್ಗೆ 7 ಗಂಟೆಗೆ ಹೋಗಿ ಟೈಮ್ ನೋಟ್ ಮಾಡಿಕೊಂಡು ಮ್ಯಾಜಿಸ್ಟ್ರೇಟ್ ಎಕನಾಲೆಡ್ಜ್‌ಮೆಂಟ್ ಕೊಟ್ಟಿರುವುದು ಸುಳ್ಳೆ? ಇಷ್ಟಾದರೂ ಕೂಡ ನೀವು ಆ ಅಧಿಕಾರಿಯನ್ನು ಆ ಸ್ಥಾನದಲ್ಲಿ ಇಡುತ್ತೀರಿ ಎಂದರೆ we have to suspect-the bona-fides I do not cost any attributes or motives to the Commissioner of Police ನಾವು ಆ ಸ್ಥಾನದಲ್ಲಿ ಇದ್ದಾಗ ಅಂದರೆ ಮಂತ್ರಿಯಾಗಿ ಕುಳಿತು ಕೊಂಡ ತಕ್ಷಣ ನಮ್ಮ ಇಲಾಖೆಯ ಅಧಿಕಾರಿಗಳು ಏನು ಮಾಡಿದರೂ ನಾವು ಅವರನ್ನು ಡಿಫೆಂಡ್ ಮಾಡುತ್ತೇವೆ ಎಂದರೆ ಈ ವ್ಯವಸ್ಥೆ ನನಗೆ ಅರ್ಥವಾಗುತ್ತಿಲ್ಲ. ಮುಖ್ಯಮಂತ್ರಿಗಳು ಇಲ್ಲ ಅವರು ನಾಳೆ ಹೇಳಿಕೆ ಕೊಡುತ್ತೇವೆ ಎಂದು ಅನಂತರ ಹೇಳಿದರು. whatever that is prepared by the Home Department ಒಂದು ಹೇಳಿಕೆ ಕೊಟ್ಟರು. ಅದನ್ನು ಒಪ್ಪುವುದಕ್ಕೆ ಸಾಧ್ಯವೇ? ಇದರಲ್ಲಿ ನಮ್ಮ ಅಥವಾ ಅವರ ಪ್ರೆಸ್ಟಿಜ್ ಅಥವಾ ಸರ್ಕಾರದ ಪ್ರೆಸ್ಟಿಜ್ ಏನೂ ಇಲ್ಲ. I question the wisdom of the commissioner for going to the rescue of his subordinates ಎಲ್ಲಾ ಒಂದಾಗಿದ್ದಾರೆ. ಅಲ್ಲಿಗೆ ಡಿಸಿಪಿ ಹೋಗಿದ್ದಾರೆ. ಅಧಿಕಾರಿಗಳ ಒಂದು ವರ್ತುಲ ನಿರ್ಮಾಣವಾಗಿದೆ. ಪೊಲೀಸ್ ಅಧಿಕಾರಿಗಳಲ್ಲೂ ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. we are proud of our officers ಆದರೆ ಇಲ್ಲಿ ಇಂಥ ಕೆಟ್ಟ ಹುಳಗಳ ಅನಾಚಾರ, ಅನರ್ಥಗಳು ಇದಕ್ಕೆ ಕಾರಣವಾಗಿದೆ. ಈ ಸಭೆಗೆ ಲಾಕಪ್ ಡೆತ್ ಮುಂತಾದ ವಿಷಯಗಳನ್ನು ತರಬಾರದು ಎಂದೆಲ್ಲಾ ಹೇಳಿದರೂ ಇಲ್ಲಿ ಮುಖ್ಯಮಂತ್ರಿಗಳು ಏನೋ ಒಂದು ಸ್ಟೇಟ್‌ಮೆಂಟ್ ಮಾಡಿ ನಾನು ಹೋಗಿ ನೋಡಿದೆ ಮಾಡಿದೆ ಎಂದೆಲ್ಲಾ ಹೇಳಿದರೆ, ಅದನ್ನು ಒಪ್ಪಲು ಸಾಧ್ಯವೇ?

They will defend themselves. ಆದುದರಿಂದ ಇವೊತ್ತು ವಿಧಾನ ಸಭೆ ಮುಕ್ತಾಯವಾಗುವುದರೊಳಗೆ ಇದರಬಗ್ಗೆ ವಿವರವನ್ನು ಕೊಡಬೇಕು. ಇದು ಒಂದು ಅತ್ಯಂತ ಗಹನವಾದ ವಿಷಯವಾಗಿದೆ. ಒಬ್ಬ ಕಾನ್ಸ್‌ಟೇಬಲ್ ನಮ್ಮ ಮನೆಗೆ ಬಂದಿದ್ದ ನಾನು ಹೇಳಬಾರದೆಂದಿದ್ದೆ ಆದರೆ ಇವೊತ್ತು ವಿಧಿ ಇಲ್ಲದೆ ಹೇಳುತ್ತಿದ್ದೇನೆ. ಅವನು ಬಂದು ಬೇಡುತ್ತಿದ್ದಾನೆ ನಮ್ಮ ಜೀವದ ಪ್ರಶ್ನೆ ನಾವು ಇರಲಿಕ್ಕೆ ಸಾಧ್ಯವಿಲ್ಲ, ಅತ್ಯಂತ ಹಿರಿಯ ಅಧಿಕಾರಿಗಳಿಂದ ನಮಗೆ ಬೆದರಿಕೆ ಬಂದಿದೆ. ಅಂಥ ಹೇಳುತ್ತಾನೆ. ಇದರಿಂದ ನಾಚಿಕೆಯಾಗುತ್ತಿದೆ. ವಿಧಾನ ಸಭೆಯಲ್ಲಿ ಈ ವಿಚಾರವನ್ನು ಎತ್ತಿದ ಮೇಲೂ ಕೂಡ ಒಬ್ಬ ಅಧಿಕಾರಿ

ಕಾನ್ಸ್‌ಟೇಬಲ್‌ನನ್ನು ಹೆದರಿಸುವಂಥ ದಬ್ಬಾಳಿಕೆ ಹಾಕುವಂಥ ಧೈರ್ಯ ಬಂತು ಎಂದರೆ ನಾವು ಯಾವ ನಾಗರೀಕ ಸಮಾಜದಲ್ಲಿ ಇದ್ದೇವೆ. Don't compel us to go to logical conclusions. ನನ್ನ ಕಾನ್ಸ್‌ಟಿಟ್ಯೂಯೆನ್ಸಿ ಪಕ್ಕದ್ದು ಮಾನ್ಯ ಲಕ್ಕಣ್ಣನವರಿಗೆ ಗೊತ್ತು ಆದುದರಿಂದ Don't compel us. ಇದು ಬರುವುದು. ನಾವು ಧರಣಿ ಕುಳಿತುಕೊಳ್ಳುವುದು ಸರಿಯಲ್ಲ.

ಈ ವಿಚಾರದಲ್ಲಿ ಮಾತ್ರ ದಯವಿಟ್ಟು ಯಾವ ಪ್ರೆಸ್ಟೀಜಿಗೂ ಹೋಗಬೇಡಿ, ಯಾವ ರಾಜಕೀಯ ಪ್ರಭಾವಕ್ಕೂ ಒಳಗಾಗಬೇಡಿ, ಯಾವ ಜಾತಿ ಪ್ರಭಾವಕ್ಕೂ ಒಳಗಾಗಬೇಡಿ, ಅವರು ಮಾಡಿದಂಥ ಅನ್ಯಾಯ ಕನ್ನಡಿಯಲ್ಲಿ ಹಿಡಿದಂತಿದೆ. ಅವರು ಮಾಡಿದಂಥ ಮೋಸ nothing short of a brutal murder. ಅಂಥ ಕೊಲೆ ಮಾಡಿದ್ದಾರೆ. ಅದನ್ನು ಸಿ.ಬಿ.ಐ. ಮಾಡಲಿ, ಸಿ.ಓ.ಡಿ. ಎನ್‌ಕ್ವಯರಿ ಮಾಡಲಿ ನಾನೇನು ಕೊಶ್ಚನ್ ಮಾಡುವುದಿಲ್ಲ. The very detention, the very fortune the very Statement of the Constable ದು ಇಷ್ಟಾದರೂ ಕೂಡ ನೀವ ಸಬ್ ಇನ್‌ಸ್ಪೆಕ್ಟರ್‌ನ್ನು, ಅಥವಾ ಇನ್‌ಸ್ಪೆಕ್ಟರ್‌ನ್ನು ಸಸ್ಪೆಂಡ್ ಮಾಡದೇ ಕುಳಿತರೆ, ಅಧಿಕಾರಿಗಳ ವರ್ತನೆಯನ್ನು ನಾವು ಕೂಲಂಕುಷವಾಗಿ ಚರ್ಚೆ ಮಾಡಬೇಕಾಗುತ್ತದೆ Don't depend on these people ಅಂತರಾತ್ಮ ಅಂತ ಹೇಳುತ್ತಾರೆ. ಅದನ್ನು ಉಪಯೋಗಿಸಿಕೊಳ್ಳಿ. ಇಂತಹ ವಿಚಾರದಲ್ಲಿ ಅಧಿಕಾರಿಗಳನ್ನು ಕೇಳಿ ಅವರು ಏನು ಹೇಳುತ್ತಾರೆ ಅದರಂತೆ ಮಾಡಬೇಡಿ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲು ಇಷ್ಟ ಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :-ಒಂದು ಮಾತನ್ನು ಹೇಳಲು ಇಷ್ಟ ಪಡುತ್ತೇನೆ. ಇಲ್ಲಿ ಪ್ರಶ್ನೆ ಇರತಕ್ಕದ್ದು.....

(ಗೊಂದಲ)

ಶ್ರೀ ಕೆ. ಲಕ್ಕಣ್ಣ :- ಬೆಂಗಳೂರು ನಗರದಲ್ಲಿ ಜಲಮಂಡಳಿಯವರು ವಾರಕ್ಕೆ ಎರಡು ದಿವಸ ನೀರು ನಿಲ್ಲಿಸುವುದಾಗಿ ಯಾರಿಗೂ ಹೇಳದೆ ಕೇಳದೆ ಪೇಪರ್‌ರಲ್ಲಿ ಪ್ರಕಟಣೆಯನ್ನು ಕೊಟ್ಟಿದ್ದಾರೆ. ಇವೊತ್ತಿನ ದಿವಸ ಇದರಿಂದ ಬೆಂಗಳೂರಿನ ಜನ ದಿಗ್ಭ್ರಾಂತರಾಗಿದ್ದಾರೆ.

(ಗೊಂದಲ)

ಶ್ರೀ ಕೆ. ಲಕ್ಕಣ್ಣ :- ಏಕಾ ಏಕಿ ಜಲಮಂಡಲಿ ಅಧ್ಯಕ್ಷರು ವಾರಕ್ಕೆ ಎರಡು ದಿನ ನಿಲ್ಲಿಸುವುದಾಗಿ ಪ್ರಕಟಣೆಯನ್ನು ಪೇಪರ್‌ನಲ್ಲಿ ಕೊಟ್ಟಿದ್ದಾರೆ. ಯಾವ ಶಾಸಕರನ್ನೂ ಕೇಳಿಲ್ಲ. ಇವತ್ತಿನ ದಿವಸ ನೀರಿಗೆ ತೊಂದರೆಯಾಗಿದೆ. ಬೆಂಗಳೂರು ನಗರದ ನಾಗರೀಕರು ಬಹಳ ದಿಗ್ಭ್ರಾಂತರಾಗಿದ್ದಾರೆ ನೀರು ಸರಬರಾಜು ಸರಿಯಿಲ್ಲ. ಹಿಂದಿನ ಅಧ್ಯಕ್ಷರು ಮುಂದಿನ ಮಳೆಗಾಲದವರೆಗೆ ನೀರಿಗೆ ಏನೂ ತೊಂದರೆಯಿಲ್ಲ. ನೀರು ಸರಬರಾಜು ಮಾಡುತ್ತೇನೆ ಎಂದು ಹೇಳಿದ್ದರು. ಈಗಿನ ಅಧ್ಯಕ್ಷರು ಬಂದು ಯಾರನ್ನು ಹೇಳದೆ ಕೇಳದೆ ವಾರಕ್ಕೆ ಎರಡು ದಿವಸ ನೀರನ್ನು ನಿಲ್ಲಿಸುತ್ತೇವೆ ಎಂದು ಹೇಳಿದ್ದಾರೆ, ಇದು ಬಹಳ ವಿಶಾದಕರವಾದ ಸಂಗತಿ ಇವತ್ತು ಏನು ಪರಿಸ್ಥತಿ ಬೆಂಗಳೂರಿನಲ್ಲಿ ಆಗಿದೆ ? ಯಾರನ್ನು ಹೇಳದೆ ಕೇಳದೆ ಅಧ್ಯಕ್ಷರು ವಾರಕ್ಕೆ ಎರಡು ದಿವಸ ನೀರನ್ನು ನಿಲ್ಲಿಸುತ್ತೇನೆ ಎಂದು ಹೇಳುತ್ತಿದ್ದಾರೆ. ಇದು ಸರಿಯಾದುದಲ್ಲ. ಶಾಸಕರುಗಳನ್ನು ನಗರ ಪಾಲಿಕೆ ಸದಸ್ಯರನ್ನು ಕರೆದು ಹಿಂದಿನ ಅಧ್ಯಕ್ಷರು ಮೀಟಿಂಗ್ ಮಾಡಿ ಈ ರೀತಿ ತೊಂದರೆ ಇದೆ. ನಾವು ಮಾಡುತ್ತಿದ್ದೇವೆ. ಎಂದು ಹೇಳುತ್ತಿದ್ದರು. ಇವತ್ತು ಇವರು ಯಾರನ್ನು ಕೇಳದೆ ಹೇಳದೆ ಈ ರೀತಿ ಮಾಡುತ್ತಿರುವುದನ್ನು ನಾನು ಖಂಡಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು :- ಈ ರೀತಿಯಾದರೆ ಕಲಾಪವನ್ನು ನಡೆಸುವುದಕ್ಕೆ ಆಗುವುದಿಲ್ಲ ಮಾನ್ಯ ಯಡಿಯೂರಪ್ಪನವರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನೊಂದು ರಾಜಕೀಯ ಪಕ್ಷದ ಸದಸ್ಯನಾಗಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ :- ಅಧ್ಯಕ್ಷರೇ ನಾನು ನೆನ್ನೆನೆ ಜೀರೋ ಅವರ್‌ನಲ್ಲಿ ಒಂದು ವಿಷಯವನ್ನು ಪ್ರಸ್ತಾ ಮಾಡುವುದಕ್ಕೆ ನೋಟೀಸು ಕಳುಹಿಸಿದ್ದೆ.

ಅಧ್ಯಕ್ಷರು :- ಅದು ನನಗೆ ಬಂದಿಲ್ಲ.

(ಗೊಂದಲ)

ಶ್ರೀ ಬಿ. ಎಸ್.ಯಡಿಯೂರಪ್ಪ:- ಈ ಲಾಕಪ್ ಸಾವಿನ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಿದ್ದೇನೆ. ಮುಖ್ಯಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ ಚರ್ಚೆಯಲ್ಲಿ ನಾನು ಭಾಗವಹಿಸಿದ್ದೆ. ವಿಧಾನಪರಿಷತ್ತಿನಲ್ಲಿ ರಾಮಚಂದ್ರಗೌಡರು ಇದರ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದ್ದಾರೆ. ಈ ರಾಜ್ಯದ ಒಬ್ಬ ಮುಖ್ಯ ಮಂತ್ರಿಗಳು ಲಾಕಪ್ ಸಾವಿನ ಹೇಳಿಕೆಯನ್ನು ಕೊಟ್ಟ ಮೇಲೆ (ಗೊಂದಲ) ಲಾಕಪ್ ಸಾವಿನ ಬಗ್ಗೆ ಸತ್ಯಕ್ಕೆ ಅಪಚಾರವಾಗಿರತಕ್ಕಂಥ ರೀತಿಯಲ್ಲಿ ಯಾರೋ (ಗೊಂದಲ) ಆ ಪೇದೆ ಲಾಕಪ್ ಸಾವನ್ನು ಬಹಿರಂಗ ಮಾಡಿದ್ದಾರೆ. ಅವನನ್ನು ಶ್ಲಾಘನೆ ಮಾಡಬೇಕಾಗಿದೆ. ಆ ಪೇದೆ ಸತ್ಯವನ್ನು ಹೊರಗಿಡದಿದ್ದರೆ ಲಾಕಪ್ ಸಾವು ಮುಚ್ಚಿ ಹೋಗುತ್ತಿತ್ತು. ಇಂಥ ಸಂದರ್ಭದಲ್ಲಿ ಒಬ್ಬ ಮುಖ್ಯ ಮಂತ್ರಿ ಹೇಳಿಕೆ ಕೊಟ್ಟ ಮೇಲೆ ಅದು ಸತ್ಯವಾಗಿ ಇರಬೇಕಾಗಿತ್ತು. ಆ ಮುಖ್ಯ ಮಂತ್ರಿಗಳ ಹೇಳಿಕೆಯನ್ನೇ ಪ್ರಶ್ನೆ ಮಾಡುವಂಥ ಕಾಲ ಈಗ ಬಂದಿದೆ. ಇದನ್ನು ಸಿಬಿಐ ತನಿಖೆಗೆ ಒಳಪಡಿಸುವುದಕ್ಕೆ ಹೇಳಿ. ಯಾವ ಪೇದೆ ಈ ಸತ್ಯವನ್ನು ಬಹಿರಂಗ ಮಾಡಿದ್ದಾನೆ. ಅವನಿಗೆ ನಿಜವಾಗಿ ಶ್ಲಾಘನೆ ಮಾಡಿ ಅವನಿಗೆ ಪ್ರಮೋಷನ್ ಕೊಡಿ. ಅವನಿಗೆ ರಕ್ಷಣೆಯನ್ನು ಕೊಡಿ. ನಾಳೆ ಅವನ ರಕ್ಷಣೆಯ ಪ್ರಶ್ನೆ ಬರುತ್ತದೆ. ಉನ್ನತ ಪೋಲೀಸ್ ಅಧಿಕಾರಿಗಳು ತಪ್ಪು ಹೇಳಿಕೆಯನ್ನು ಕೊಟ್ಟು ಮುಖ್ಯ ಮಂತ್ರಿಗಳ ಬಾಯಿಂದ ಹೇಳಿಸುವಂಥ ಒಂದು ಅಕ್ಷಮ್ಯ ಅಪರಾಧವನ್ನು ಮಾಡಿದ್ದಾರೆ. ಅಧಿಕಾರಿಗಳನ್ನು ಮುಚ್ಚಿ ಹಾಕುವಂಥದ್ದು ಉನ್ನತ ಅಧಿಕಾರಿಗಳು ಅವರ ಜೊತೆ ಮಾಡಿರುವಂಥ ಈ ಲಾಕಪ್ ಸಾವಿಗೆ ರಕ್ಷಣೆ ಕೊಡುವಂಥ ಒಂದು ಸ್ಥಿತಿ ಬಂದರೆ ಇವತ್ತು ನೂರಾರು ಸಾವುಗಳ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇದ್ದಾವೆ. ಇಡೀ ರಾಜ್ಯದಲ್ಲಿ ಪೊಲೀಸ್‌ನವರು ಈ ರೀತಿ ಜನಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದರ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ತಾವು ಬೇರೆ ರೂಪದಲ್ಲಿ ಅವಕಾಶ ಕೊಡಿ. ಈಗ ಇಷ್ಟೇ ನಾನು ಹೇಳುವಂಥಾದ್ದು. ದಯಮಾಡಿ ಇದನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು, ಮತ್ತೆ ಆ ಪೇದೆ ಯಾರು ಬೆಳಗಿನ ಜಾವ 6 ಗಂಟೆಗೆ ಸತ್ಯವನ್ನು ಬಹಿರಂಗ ಮಾಡಿದ್ದಾನೆ ಅವನಿಗೆ ರಕ್ಷಣೆ ಕೊಡಬೇಕು ಮತ್ತೆ ಮುಖ್ಯ ಮಂತ್ರಿಗಳು ಏನು ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಕೊಟ್ಟಿದ್ದಾರೆ, ಆದರಿಂದ ಅವರು ಈ ಸದನಕ್ಕೆ ಬಂದು ಕ್ಷಮಾಪಣೆಯನ್ನು ಕೇಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇಲ್ಲದಿದ್ದರೆ ೨ ಚೇರ್‌ನಲ್ಲಿ ಕುಳಿತು ಈ ಸದನದ ಚರ್ಚೆಯ ಸದುಪಯೋಗ ಏನೋ ಸ್ವಾಮಿ ? ಇಲ್ಲಿ ಏತಕ್ಕೋಸ್ಕರ ನಾವು ಬಂದಿದ್ದೇವೆ. ? ಇಲ್ಲ ಚರ್ಚೆಯಾದ ಮೇಲೆ ಇಲ್ಲಿ ಗೊತ್ತಿರಲಾರದ್ದು ನೂರು ಇದೆ. ಅದರ ಬಗ್ಗೆ ನ್ಯಾಯ ಅವರಿಗೆ ಸಿಗಬೇಕಾಗಿದೆ. ಸದನದಲ್ಲಿ ಪ್ರಶ್ನೆ ಮಾಡಿದ ಮೇಲೆ ವಿವರವಾದಂಥ ವಿಚಾರವನ್ನು ಈ ಸದನದಲ್ಲಿ ವಿರೋಧ ಪಕ್ಷಗಳು ಆಡಳಿತ ಪಕ್ಷಗಳು ಕೊಟ್ಟ ಮೇಲೂ ಸಹಾ ಮುಖ್ಯಮಂತ್ರಿಗಳು ಸತ್ಯಾಸತ್ಯತೆಯನ್ನು ಪರೀಕ್ಷೆ ಮಾಡದೇ ಸದನದಲ್ಲಿ ಈ ರೀತಿ ಹೇಳಿಕೆಯನ್ನು ಕೊಡುತ್ತಾರೆ ಎನ್ನುವುದಾದರೆ ಈ ಹೇಳಿಕೆ ಬಗ್ಗೆ ಜನ ಏನು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ?

ಅಧಿಕಾರಿಗಳು ಇನ್ನು ಮುಂದೆ ಗಂಭೀರವಾಗಿ ಕೆಲಸ ಮಾಡುತ್ತಾರೇನು ? ಪೋಲೀಸ್ ಸ್ಟೇಷನ್‌ನಲ್ಲಿ ಲಾಕಪ್ ಸಾವುಗಳಾಗುತ್ತಿವೆ. ಬೇರೆ ಬೇರೆ ರೀತಿ ಸಾವುಗಳಾಗುತ್ತಿವೆ. ಅವರಿಗೆ ರಕ್ಷಣೆ ಇಲ್ಲದಂತಾಗಿದೆ. ಇದಕ್ಕೋಸ್ಕರ ನಿಮ್ಮಲ್ಲಿ ಪ್ರಾರ್ಥನೆ ಮಾಡುವಂಥದ್ದು ದಯಮಾಡಿ ತಾವು ಇದನ್ನು ಸಿಬಿಐ ತನಿಖೆಗೆ ಅವಕಾಶ ಮಾಡಿಕೊಟ್ಟು ಆ ಪೇದೆಗೆ ರಕ್ಷಣೆ ಕೊಡುವಂಥ ಒಂದು ಕೆಲಸವನ್ನು ತಾವು ಮಾಡಿಸಬೇಕು. ನಮ್ಮ ರಕ್ಷಣೆಗೆ ತಾವು ಬರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ ನಾವು ನಿಮ್ಮ ಕಚೇರಿಗೆ ಬಂದು ಕೇಳಿ ಕೊಂಡಾಗ ತಾವು ಇಲ್ಲಿ ನಮಗೆ ಚರ್ಚೆ ಮಾಡಲು ಅನುಮತಿ ಕೊಟ್ಟಿರಿ, ಅದಕ್ಕೆ ಧನ್ಯವಾದ ಅರ್ಪಿಸುತ್ತೇವೆ.ಆದರೆ ತಮ್ಮ ಗಮನಕ್ಕೆ ಒಂದು ತರುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸದನದ ಬಗ್ಗೆ ಗೌರವ ಇದೆಯೋ ಅಥವಾ ಇಲ್ಲವೋ ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಅವರು ಈ ಸದನದಲ್ಲಿ ಕಾಣಿಸುತ್ತಿಲ್ಲ. ಈಗ ಸದನ ಶುರುವಾಗಿದೆ. 11 ಗಂಟೆ ಆಗಿದೆ. ಯಾರೋ ಹೇಳಿದರು ಕೌನ್ಸಿಲ್‌ನಲ್ಲಿ ಕ್ವಶ್ಚನ್ ಅವರ್ ಇದೆ ಎಂದು. ಸಂಜೆ 5 ಗಂಟೆಗೆ ದಿನ ಮುಖ್ಯ ಮಂತ್ರಿಗಳು ಬಂದು ಇಲ್ಲಿ ಕುಳಿತರೆ ನಾವು ಏನು ಮಾಡುವುದು ? ಇಲ್ಲಿ ಇಷ್ಟು ಜನ ಸಚಿವರುಗಳು ಕುಳಿತುಕೊಂಡಿದ್ದಾರೆ ನಾನು ಮಾತನಾಡಿರುವುದನ್ನು ಯಾರು ನೋಟ್ ಮಾಡಿಕೊಂಡಿದ್ದಾರೆ ? ನಮ್ಮದು ಒನ್ ವೇ ಟ್ರಾಫಿಕ್ ತರಹ ಆಗಿದೆ. ನಾವು ಹೇಳುವುದನ್ನು ಯಾವ ಮಂತ್ರಿಯೂ ನೋಟ್ ಮಾಡಿಲ್ಲ. ಮುಖ್ಯ ಮಂತ್ರಿಯವರ ಕಾರ್ಯಾಲಯದಿಂದ ಅಧಿಕಾರಿಗಳು ಯಾರು ಬಂದಿದ್ದಾರೆಂದು ನಮಗೆ ಗೊತ್ತಿಲ್ಲ. ಗೃಹ ಇಲಾಖೆಯಿಂದ ಯಾರೂ ಬಂದಿದ್ದಾರೆಂದು ಅದು ಗೊತ್ತಿಲ್ಲ. ಈ ಪ್ರಾಕಾರ ಆದರೆ ಹೇಗೆ ? ಅವರಿಗೆ ಸರಿಯಾಗಿ ಉತ್ತರವನ್ನು ಕೊಡಲಿಕ್ಕೆ ಬರುತ್ತಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ :- ತಾವು ಮಾತನಾಡುವುದನ್ನೆಲ್ಲಾ ನಾವು ನೋಟ್ ಮಾಡೀಕೊಳ್ಳುತ್ತೇವೆ. ಅವರು ಬಂದ ನಂತರ ಕೊಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಮುಖ್ಯ ಮಂತ್ರಿಗಳಿಗೆ ತಾವು ಹೇಳಬೇಕಾಗುತ್ತದೆ. ಈ ಸದನಕ್ಕೂ ಗೌರವವಿದೆ. ಮೇಲ್ಮನೆಗೆ ಹೋಗಬಾರದೆಂದು ಹೇಳುವುದಿಲ್ಲ. ಹೋಗಬೇಕು, ಅಲ್ಲಿಯೂ ನಮ್ಮ ಗೌರವಾನ್ವಿತ ಸದಸ್ಯರುಗಳು ಇದ್ದಾರೆ. ಗೌರವಾನ್ವಿತ ಮನೆ ಇದೆ. ಆದರೆ ಇಲ್ಲಿ ಈ ಪ್ರಕಾರ ಆದರೆ ನಾವು ಯಾವ ಪ್ರಕಾರ ಕೆಲಸ ಮಾಡಬೇಕು? ಇವೊತ್ತು ಸಂಜೆಯೊಳಗೆ ಉತ್ತರ ಕೊಡುತ್ತೇವೆಂದು ಅವರು ಹೇಳಬೇಕು. ನಾನು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಬಿಜಾಪುರದಲ್ಲಿ ಒಂದು ದೊಡ್ಡ ಸ್ಕಾಂಡಲ್ ಆಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಇವತ್ತು ನಾವು ಅನೇಕ ವಿಷಯಗಳನ್ನು ಈ ಸದನದ ಗಮನಕ್ಕೆ ತರುತ್ತಿದ್ದೇವೆ. ಇವತ್ತು ಬೆಳಿಗ್ಗೆಯಿಂದ 5-6 ಪ್ರಮುಖವಾದಂತಹ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಒಂದಕ್ಕೂ ಸರ್ಕಾರದಿಂದ ಉತ್ತರ ಸಿಕ್ಕದೆ ಇದ್ದರೆ ಬರೀ ಮನವಿಯನ್ನು ಅರ್ಪಿಸುವಂಥ ಸದನವಾಗುತ್ತದೆ. ಆಗ ಉಪಯೋಗವಾಗುವುದಿಲ್ಲ. ಅದಕ್ಕೆ ಮಾನ್ಯ ವೈ. ಕೆ. ರಾಮಯ್ಯನವರು ತುಂಬ ನೊಂದು ಹೇಳಿದ್ದುದು. ಚರ್ಚೆ ನಡೆಯುತ್ತಿರುವಾಗ್ಗೆ ಸರ್ಕಾರ ಗಂಭೀರವಾಗಿ ತೆಗದುಕೊಳ್ಳದೆ ಒಂದು ಹೇಳಿಕೆಯನ್ನು ಕೊಡದೇ ಇದ್ದರೆ ಹೇಗೆ ? ನಾವು ತಮ್ಮಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡಿ ಒಂದು ಮನವಿಯನ್ನು ಮಾಡುತ್ತಿದ್ದೇನೆ. ಜನರ ಪ್ರತಿನಿಧಿಗಳಾಗಿ ಬಂದು ನಾವು ಇಲ್ಲಿ ಚರ್ಚೆ ಮಾಡದೆ ಇದ್ದರೆ ಹೇಗೆ ? ಬಜೆಟ್ ಅಧಿವೇಶನವನ್ನು ಮುಂದುವರಿಸಿ ಇದು ಮಹತ್ವವಾದದ್ದು. ಮಾನ್ಯ ವಿರೋಧ ಪಕ್ಷದ ನಾಯಕರೇ ನನ್ನ ಪ್ರಾರ್ಥನೆ ಇಷ್ಟೇ, ಇಲ್ಲದೆ ಇದ್ದರೆ ವಿರೋಧ ಪಕ್ಷಗಳನ್ನೆ ಅವರು ಲೈಟಾಗಿ ತೆಗದುಕೊಳ್ಳುತ್ತಿದ್ದಾರೆ, ನಮ್ಮ ಮಾತಿಗೆ ಮಹತ್ವವಿಲ್ಲದಂತಾಗುತ್ತದೆ. ಅದಕ್ಕೆ ವಿರೋಧ ಪಕ್ಷದ ನಾಯಕರಾದ ನೀವು ಜವಾಬ್ದಾರರಾಗುತ್ತೀರಾ ? ಅದಕ್ಕೆ ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡುವಂಥದ್ದು ನಾವು ಕೇಳಿದ್ದಕ್ಕೆ ಉತ್ತರ ಕೊಡದೆ ಇದ್ದರೆ ಮುಂದಿನ ವಿಷಯಕ್ಕೆ ಹೋಗುವುದು ಬೇಡ, ಇಲ್ಲದಿದ್ದರೆ ಪ್ರತಿಭಟನೆ ಮಾಡಿ ಹೊರಗೆ

ಹೋಗೋಣ. ಈ ಕಡೆಯವರೆಗೆ ಮಹತ್ವವನ್ನು ಕೊಡದೇ ಇದ್ದರೆ ಹೇಗೆ ? ನಾವೇನೂ ಬರೀ ಮಾತನಾಡುವುದಕ್ಕೆ ಇಲ್ಲಿಗೆ ಬಂದಿಲ್ಲ. ಮಹತ್ವವಾದ ವಿಷಯಗಳಿಗೆ ಇಲ್ಲಿ ಸರಿಯಾದಂಥಹ ಉತ್ತರ ಸರ್ಕಾರ ಕೊಡುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ? ಉಪ ಮುಖ್ಯ ಮಂತ್ರಿಗಳು ಎಲ್ಲಿ ಹೋಗಿದ್ದಾರೆ ? ಹಾಗಾದರೆ ನಮಗೂ ಬೇರೆ ಕೆಲಸವಿಲ್ಲವೇ ? ಈ ಸದನದ ಬಗ್ಗೆ ಮಹತ್ವ ಇಲ್ಲದೇ ಇದ್ದರೆ ಹೇಗೆ ? ನಾವು ಪ್ರಸ್ತಾಪಿಸುವ ವಿಷಯಗಳಿಗೆ ಅವರುಗಳು ಉತ್ತರವನ್ನು ಕೊಡದೆ ಇದ್ದರೆ ನಾವು ಕಾರ್ಯ ಕಲಾಪಗಳಲ್ಲಿ ಭಾಗವಹಿಸುವುದಿಲ್ಲ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ :- ಮಾನ್ಯ ಯಡಿಯೂರಪ್ಪನವರು ಅಡ್ಡಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ ನಾವೆಲ್ಲ ಅಡ್ಡಿ ಮಾಡುತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :- ಅಧ್ಯಕ್ಷರೇ, Cabinet system of the Government ಅಂದರೆ Collective responsibilty ಮುಖ್ಯ ಮಂತ್ರಿಗಳೇ, ಇರಬೇಕೆನ್ನುವ ಒತ್ತಡ ಇಲ್ಲ. ಆದರೆ ಈ ಸರ್ಕಾರಕ್ಕೆ ನಾಲಿಗೆ ಏತಕ್ಕೆ ಬಿದ್ದು ಹೋಯಿತು? ನಾನು ಮೊದಲು ಕಿವುಡು ಸರ್ಕಾರ ಅಂಥ ತಿಳಿದಿದ್ದೆ ಆದರೆ ಈಗ ನೋಡಿದರೆ ನಾಲಿಗೆ ಇಲ್ಲ. ಇಷ್ಟು ಜನ ಅತಿರಥ ಮಹಾರಥರು ಬಂದು ಕುಳಿತಿದ್ದಾರೆ. ಈ ವಿಚಾರಗಳ ಬಗ್ಗೆ ಚರ್ಚಾರವನ್ನು ಎತ್ತಿ ಹೀಗೆ ಆಗಿದೆ ಆಯಿತು ನಾವು ಗಮನಿಸಿದ್ದೇವೆ ಅಂಥ ಹೇಳಿದ್ದರೆ ಸಾಕಿತ್ತು. ಇದಕ್ಕೆ ಮುಖ್ಯ ಮಂತ್ರಿಗಳೇ ಇರಬೇಕು ಎಂದು ಇಲ್ಲ. ಮೇಲ್ಮನೆಯಲ್ಲಿರಬಹುದು ಅಥವಾ ಬೇರೆ ಕಾರ್ಯಕ್ರಮದಲ್ಲಿ ಭಾಗವಹಿಸಿರಬಹುದು. ಈಗ ಪಾರ್ಲಿಮೆಂಟರಿ ಸಿಸ್ಟಮ್ ಆಫ್ ಡೆಮಾಕ್ರಸಿಯಲ್ಲಿ ನಾವು ಕೇಳಿದ್ದೆವು. ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರುರವರು 11 ಗಂಟೆಗೆ ಬರುತ್ತಿದ್ದರಂತೆ, ಕೊನೆಯವರಾಗಿ ಹೊರಗೆ ಹೋಗುತ್ತಿದ್ದರು. ಅದಕ್ಕಿಂತ ದೊಡ್ಡ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ ಎಂದು ನಾನು ಭಾವನೆಯನ್ನು ಮಾಡಿಲ್ಲ. ನಾನು ಅಲ್ಲಿ ಕುಳಿತುಕೊಂಡು ಕೆಲಸ ಮಾಡಿದವನು. ನಾನು ತಮ್ಮಲ್ಲಿ ಬಹಳ ಅತ್ಯಂತ ನೋವಿನಿಂದ ಹೇಳುತ್ತೇನೆ. ನಿಯಮಗಳಿಗೆ ಏನೂ ಗೌರವ ಇದ್ದ ಹಾಗೆ ಕಾಣಲಿಲ್ಲ. ನಿಯಮಗಳನ್ನು ಆಧರಿಸಿ ನಾವು ಏನಾದರೂ ನೋಟೀಸ್‌ಗಳನ್ನು ಕಳುಹಿಸಿ ಚರ್ಚೆ ಮಾಡಬೇಕೆಂದರೆ ಅವುಗಳು ಗಮನಕ್ಕೆ ಬರುವುದಿಲ್ಲ. ಆದರೆ ಯಾರೂ ಬೇಕಾದರೂ ಎದ್ದು ನಿಂತು ಮಾತನಾಡಬಹುದು ಅಂತ ಆದರೆ ನಾನು ಅದೇ ಸ್ಥಿತಿಗೆ ಇಳಿಯಬೇಕಾಗುತ್ತದೆ. ನಾನು ಅದಕ್ಕೆ ಹೋಗಬಾರದೆಂದು ನಾನು ಬಹಳ ದಿನಗಳಿಂದ ಕಾದಿದ್ದೇನೆ ನನ್ನ ಕ್ಷೇತ್ರದಲ್ಲಿ ಮಂಗನ ಕಾಯಿಲೆಯಾಗಿ ಜನ ಸಾಯುತ್ತಿದ್ದಾರೆ, 3 ವರ್ಷಗಳಿಂದ ಡಾಕ್ಟರುಗಳನ್ನು ಕೊಡಿ ಎಂದು ಕೇಳುತ್ತಿದ್ದೇನೆ. ಈ ಸರ್ಕಾರ ಕಳುಹಿಸುತ್ತಿಲ್ಲ. ಹಾಗೆಯೇ ಜನರನ್ನು ಸಾಯುವುದಕ್ಕೆ ಬಿಡೋಣವೇ? ಪ್ರಸ್ತಾಪಕ್ಕೆ ಏನಾದರೂ ಪರಿಣಾಮಕಾರಿಯಾದಂಥ ಉತ್ತರ ಸರ್ಕಾರದಿಂದ ಸಿಗುತ್ತದೆ ಅಂತ ಆದರೆ ಪ್ರಸ್ತಾಪವನ್ನು ಮಾಡೋಣ ಇಲ್ಲದೆ ಇದ್ದರೆ ನಾನು ತಮ್ಮಲ್ಲಿ ಮನವಿ ಮಾಡಿಕೊಂಡು ಈ ಸದನಕ್ಕೆ ನಾನು ನಮಸ್ಕಾರ ಹಾಕಿ ಹೊರಗೆ ಹೋಗುವುದಕ್ಕೆ ಅಪ್ಪಣೆ ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಒಪ್ಪಿ ಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳು ಬೇರೆ ಕಡೆ ಹೋಗಿರುತ್ತಾರೆ. ಆದರೆ ಮತ್ತೊಬ್ಬರು ಯಾರಾದರೂ ಹೇಳಬಹುದಲ್ಲ, ಯಾರೂ ಮಾತನಾಡುವುದಕ್ಕೆ ಆಗಿಲ್ಲ, ಹೇಳಲಿಕ್ಕೆ ಆಗಿಲ್ಲ, ಅಂದರೆ ಹೇಗೆ. ಕಿವಿಯಿಲ್ಲ. ಬಾಯಿಯಿಲ್ಲ, ನಾಲಿಗೆ ಇಲ್ಲ ಕಣ್ಣು ಇಲ್ಲ, ಅಂದರೆ ಹೇಗೆ ? ನಾವು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ, ಇನ್ನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ತಮ್ಮ ಅನುಮತಿಯನ್ನು ತೆಗೆದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬರುವವರೆಗೂ ಸದನವನ್ನು ಮುಂದಕ್ಕೆ ಹಾಕಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಇದೇ ರೀತಿ ಬಹಳ ಪ್ರಮುಖವಾಗಿರುವಂತಹ ಗೃಹ ಮಂಡಳಿಯ ವಿಚಾರದಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕಾಗಿದೆ. ಅವರು ಬರಲಿ ಯಾವಾಗಲಾದರೂ ಹೇಳಿಕೆಯನ್ನು ಕೊಡಲಿ, ಆಡಳಿತ ಪಕ್ಷದವರು ಪ್ರಸ್ತಾಪ ಮಾಡಿದ

ವಿಷಯದ ಬಗ್ಗೆ ಮೊದಲು ಉತ್ತರವನ್ನು ಕೊಡಲಿ, ಚಿಂತೆ ಇಲ್ಲ ಆದರೆ ಈ ರೀತಿ ಏನು ನಡೆದುಕೊಂಡು ಹೋಗುತ್ತಿದೆ, ಇದರ ಬಗ್ಗೆ ಯೋಚನೆ ಮಾಡಿ ಸದನವನ್ನು ಮುಂದೂಡಿ ಅನೇಕ ಗಂಭೀರವಾದ ವಿಷಯಗಳನ್ನು ಚರ್ಚೆ ಮಾಡುತ್ತಿದ್ದೇನೆ. ಅವರ ಗಮನಕ್ಕೆ ತರುತ್ತಿದ್ದೇನೆ, ತಪ್ಪಾಗಿದ್ದರೆ ಈ ಮಾಹಿತಿ ಸರಿಯಿಲ್ಲ ಅಂತ ಸರ್ಕಾರ ಹೇಳಲಿ, ಮುಖ್ಯಮಂತ್ರಿಗಳು ಹೇಳಲಿ, ನಮ್ಮದೇನು ಬೇಸರ ಇಲ್ಲ. ಆದರೆ ಇವತ್ತು ಯಾರೂ ಸಹ ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ. ಬರೀ ಕಚ್ಚಾಟ ಬಡಿದಾಟ ಗೊಂದಲ ಆಗುತ್ತಿದೆ. ಅದ್ದರಿಂದ ಸದನವನ್ನು ಮುಂದೂಡಿ ಬೀಸೋದೊಣ್ಣೆ ತಪ್ಪಿದರೆ ಸಾಕು ಎನ್ನುವಂತಾಗಿದೆ. ಅಧಿಕಾರಿಗಳಲ್ಲಿ ಕೋ -ಆಪರೇಷನ್ ಇಲ್ಲ. ಪರಸ್ಪರ ಮಂತ್ರಿಗಳಲ್ಲಿ ಕೋ-ಆಪರೇಷನ್ ಇಲ್ಲ. ಹಾಗಾಗಿ ಸರ್ಕಾರದಲ್ಲಿ ಅಸ್ತಿರತೆ ತಾಂಡವವಾಡುತ್ತಿದೆ. ಇದಕ್ಕೆ ಉತ್ತರ ಕೊಡುವಂತಹ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ಮುಖ್ಯಮಂತ್ರಿಗಳು ಈ ಸದನಕ್ಕೆ ಬರಬೇಕು ಇಲ್ಲದಿದ್ದರೇ ನಾವು ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಸಿದ್ಧರಿಲ್ಲ, ಇದರಿಂದ ವಿರೋಧ ಪಕ್ಷಗಳ ಬಗ್ಗೆ ಇರುವಂತಹ ಗೌರವ ಇಲ್ಲದಂತಾಗುತ್ತದೆ. ಈ ವಿಷಯದಲ್ಲಿ ಬಿಜೆಪಿಯ ನಾಲ್ಕು ಜನ ಸದಸ್ಯರುಗಳಾದ ನಾವುಗಳು ನಿಮಗೆ ಸಹಕಾರ – ಬೆಂಬಲ ಕೊಟ್ಟು ನಿಮ್ಮ ಜೊತೆ ಬರುವುದಕ್ಕೆ ಸಿದ್ದರಿದ್ದೇವೆ ಬನ್ನಿ ಹೋಗೋಣ.

ಶ್ರೀ ಕಾಗೋಡು ತಿಮ್ಮಪ್ಪ :- ಮಂತ್ರಿಗಳಾರು ಉತ್ತರ ಕೊಡುವುದಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. ಈಗ ಕಾರ್ಯಕ್ರಮದ ಪಟ್ಟಿ ತಾವು ಏನೂ ಕೊಟ್ಟಿದ್ದೀರಿ. ಅದರ ಪ್ರಕಾರ ಕಾರ್ಯಕ್ರಮ ಹೋಗುತ್ತಿಲ್ಲ. ಇಷ್ಟೊತ್ತಿನವರೆಗೆ ನಡೆದಿರುವಂತಾದ್ದು ಕಾರ್ಯಕ್ರಮಗಳ ಪಟ್ಟಿಗೆ ಸಂಬಂಧ ಪಡದೆ ಇರತಕ್ಕದ್ದಂಥದ್ದು. ಮೊದಲು ಕಾರ್ಯಕ್ರಮದ ಪಟ್ಟಿ ಪ್ರಕಾರ ಸಭೆ ನಡೆಯಬೇಕು.

ಶ್ರೀ ಆರ್.ವಿ. ದೇಶಪಾಂಡೆ :- ಹಾಗಾದರೆ, ಕಾರ್ಯಕ್ರಮದ ಪಟ್ಟಿ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರಬೇಕು. ಎಲ್ಲಿ ಅವರು?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :- ನಾವು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ ಇದು ಪ್ರಾಮುಖ್ಯವಾದ ವಿಷಯವಲ್ಲವೇ?

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯಿಲ್ಲದೆ ಯಾವುದೇ ವಿಚಾರ ಕೂಡ ಸದನದಲ್ಲಿ ಪ್ರಸ್ತಾಪವಾಗಿಲ್ಲ. ತಮ್ಮ ಅನುಮತಿ ಪಡೆದುಕೊಂಡೆ ವಿಚಾರಗಳು ಪ್ರಸ್ತಾಪವಾಗಿರುವಂಥಾದ್ದು. ಕಾರ್ಯಕ್ರಮದ ಪಟ್ಟಿಯಲ್ಲಿರತಕ್ಕಂಥ ವಿಚಾರಗಳ ಬಗ್ಗೆ ನಮಗೆ ಸಂಪೂರ್ಣವಾದ ನಂಬಿಕೆ ಇದೆ, ಅದರ ಪ್ರಕಾರ ನಾವು ಹೋಗಲೇ ಬೇಕಾಗಿದೆ., ಅದು ನಮ್ಮ ಕರ್ತವ್ಯವು ಹೌದು. ಆದರೆ ಅನೇಕ ಸಂದರ್ಭದಲ್ಲಿ ತಮ್ಮ ಅನುಮತಿಯಿಲ್ಲದ ಅನೇಕ ವಿಚಾರಗಳು ಪ್ರಸ್ತಾಪವಾಗುವುದಿಲ್ಲ, ಕಡತಕ್ಕೆ ಯಾವುದೂ ಕೂಡ ಹೋಗುವುದಿಲ್ಲ. ಪೊಲೀಸ್ ಠಾಣೆಗಳಲ್ಲಿ ಜನರಿಗೆ ರಕ್ಷಣೆ ಇಲ್ಲದಿರುವ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದು ಬೇಡವೆ?

ಶ್ರೀ ಕಾಗೋಡು ತಿಮ್ಮಪ್ಪ :- ಪಾಯಿಂಟ್ ಆಫ್ ಆರ್ಡರ್ ಕಾರ್ಯಕ್ರಮದ ಪಟ್ಟಿ ಪ್ರಕಾರ ಕಲಾಪ ನಡೆಯ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಕಾರ್ಯಕ್ರಮದ ಪಟ್ಟಿಯಲ್ಲಿಲ್ಲದ ಅನೇಕ ವಿಚಾರಗಳನ್ನು ಕೂಡ ಶೂನ್ಯ ವೇಳೆಯಲ್ಲಿ ಎತ್ತುವುದಕ್ಕೆ ಅವಕಾಶವಿದೆ. ಈಗ ಶೂನ್ಯ ವೇಳೆ ಇನ್ನೂ ಬಂದಿಲ್ಲ. ಶೂನ್ಯ ವೇಳೆ ಬರುವುದಕ್ಕಿಂತ ಮುಂಚಿತವಾಗಿ ಕಾರ್ಯಕ್ರಮದ ಪಟ್ಟಿ ಪ್ರಕಾರ ಕಲಾಪ ನಡೆಸುವುದಕ್ಕೆ ಅವಕಾಶ ಕೊಡದ ರೀತಿಯಲ್ಲಿ ನಾವು ಎಲ್ಲ ಕೆಲಸಗಳನ್ನು ನಡೆಸುತ್ತೇವೆಯೇ? ಹಾಗಿದ್ದರೆ ಕಾರ್ಯಕ್ರಮದ ಪಟ್ಟಿ ಏಕೆ ಬೇಕು? ಕಾರ್ಯಕ್ರಮದ ಪಟ್ಟಿ ಪ್ರಕಾರ ಸಂಬಂಧ ಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲದಿದ್ದರೆ ಆಗ ತರಾಟೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆದರೆ ಕಾರ್ಯಕ್ರಮದ ಪಟ್ಟಿ ಪ್ರಕಾರ ಹೋಗದೆ ಬೇರೆ ವಿಷಯಗಳನ್ನು ತೆಗೆದುಕೊಂಡರೆ ಸಂಬಂಧ ಪಟ್ಟ ಮಂತ್ರಿಗಳು .....

ಶ್ರೀ ಆರ್. ವಿ. ದೇಶಪಾಂಡೆ :- ನಾನು ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕೆಂದು ಅಧ್ಯಕ್ಷರ ಕೊಠಡಿಗೆ ಹೋಗಿ ಕೇಳಿದ್ದೇನೆ. ಅವರು ವಿಷಯ ಪ್ರಸ್ತಾಪಿಸಲು ನನಗೆ ಅನುಮತಿ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ನಾನು ಅವರಿಗೆ ಅಪೀಲ್ ಮಾಡುತ್ತಿದ್ದೇನೆ. ಅಧ್ಯಕ್ಷರು ಅನುಮತಿಯನ್ನು ನಿಮಗೆ ಕೊಟ್ಟಿರಬಹುದು, ನನಗೂ ಕೊಟ್ಟಿದ್ದಾರೆ. ನನಗೂ ಹೇಳುವುದಕ್ಕೆ ಅವಕಾಶವಿದೆ. ನಿಮಗೊಬ್ಬರಿಗೆ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಪಾಯಿಂಟ್ ಆಫ್ ಆರ್ಡರ್, ಮಾನ್ಯ ಅಧ್ಯಕ್ಷರೇ ಶೂನ್ಯ ವೇಳೆಯಲ್ಲಿ ನಮ್ಮ ಅನುಮತಿ ಪಡೆದುಕೊಂಡು ಏನು ನಾವು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಇದು ಪ್ರಾಮುಖ್ಯವಾದಂಥ ವಿಷಯವಾಗಿದೆ. ಆದರೆ ಶೂನ್ಯ ವೇಳೆಯಲ್ಲಿ ನೀವು ಪ್ರಸ್ತಾಪಿಸುತ್ತಿರುವ ವಿಷಯ ಪ್ರಾಮುಖ್ಯವಾಗಿರತಕ್ಕಂಥಾದ್ದಲ್ಲ. ಅದಕ್ಕೆ ಸರ್ಕಾರ ಉತ್ತರ ಕೊಡಬೇಕಾಗಿಲ್ಲವೆಂದು ಬೇಕಾದರೆ ತಾವು ರೂಲಿಂಗ್ ಕೊಡಿ.

(ಗೊಂದಲ)

ನಾನು ಸದಸ್ಯನಾಗಿ ಹೇಳುತ್ತಿದ್ದೇನೆ ಇದು ತಮ್ಮ ನಿಯಮಾವಳಿಗೆ ವಿರುದ್ಧವಾದ ಮಾತಾಗಿದೆ. ನಿಮಗೆ ಪರೋಕ್ಷವಾಗಿ ಅಪಮಾನ ಮಾಡಿದಂತಾಗುತ್ತದೆ. ನಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವಂಥ ಪ್ರತಿಯೊಂದು ವಿಷಯಕ್ಕೂ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಉತ್ತರ ಕೊಡಬೇಕಾಗಿಲ್ಲವೆಂದು ರೂಲಿಂಗ್ ಕೊಡಿ.

ಅಧ್ಯಕ್ಷರು :- ಈಗ ಸದನದ ಕಾರ್ಯಕಲಾಪಗಳು ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2-15ಕ್ಕೆ ಸೇರುವುದು.

(ಸದನವು 1-10 ಕ್ಕೆ ಮುಕ್ತಾಯವಾಗಿ ಪುನಃ ಮಧ್ಯಾಹ್ನ 2-15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

ಸದನವು ಪುನಃ 2-40 ಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಗಮನ ಸೆಳೆಯುವ ಸೂಚನೆ

ವಿಷಯ :- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊರ ವ್ಯಾಪ್ತಿಯಲ್ಲಿರುವ ರೆವಿನ್ಯೂ ನಿವೇಶನಗಳಲ್ಲಿ ವಾಸವಾಗಿರುವ ಅನೇಕ ಬಡ ಮತ್ತು ಮಧ್ಯಮ ವರ್ಗದ ಜನರ ನಿವೇಶನಗಳ ಸಕ್ರಮ.

ಶ್ರೀ ಕೆ. ಲಕ್ಕಣ್ಣ (ರಾಜಾಜಿ ನಗರ):- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊರ ವ್ಯಾಪ್ತಿಯಲ್ಲಿರುವ ರೆವಿನ್ಯೂ ನಿವೇಶನಗಳಲ್ಲಿ ವಾಸವಾಗಿರುವ ಅನೇಕ ಬಡ ಮತ್ತು ಮಧ್ಯಮ ವರ್ಗದ ಜನರ ನಿವೇಶನಗಳನ್ನು ಸಕ್ರಮಗೊಳಿಸಿ ತೊಂದರೆಯನ್ನು ನಿವಾರಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :- ಅಧ್ಯಕ್ಷರೇ ಬೆಂಗಳೂರು ನಗರ ಭಾಗದ ಮತ್ತು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸುವ ವಿಚಾರದಲ್ಲಿ ''ಕರ್ನಾಟಕದ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು